ಆಧುನಿಕ ಮಲಯಾಳಂ ಸಾಹಿತ್ಯ ಲೋಕದಲ್ಲಿ ಮಹತ್ತರ ಲೇಖಕರಾಗಿರುವ ಎಂ.ಟಿ.ವಾಸುದೇವನ್ ನಾಯರ್ ಚಲನ ಚಿತ್ರ ಕ್ಷೇತ್ರದಲ್ಲಿಯೂ ಗುರುತಿಸಿಕೊಂಡವರು. ಚಿತ್ರ ನಿರ್ದೇಶಕರು. ಭೀಮಸೇನನ ದೃಷ್ಟಿಕೋನದಲ್ಲಿ ಮಹಾಭಾರತ ಕಥೆಯನ್ನು 'ರಾಂಡಮೂಜಂ' ಎಂಬ ಶೀರ್ಷಿಕೆಯಡಿ ಮರುಹೆಣೆದವರು. ಸಾಹಿತ್ಯ ಕ್ಷೇತ್ರಕ್ಕೆ ಅವರ ಕೊಡುಗೆಯನ್ನು ಪರಿಗಣಿಸಿ ಅವರಿಗೆ ಜ್ಞಾನಪೀಠ ನೀಡಿ ಪುರಸ್ಕರಿಸಲಾಗಿದೆ.

ಸಂಜೆ ಬಿಲ್ವ ಕಟ್ಟೆಯಲ್ಲಿ ದೀಪ ಉರಿಯುತ್ತಿದೆ. ನಾಣು ಜಗಲಿಯಲ್ಲಿ ಕುಳಿತು ನಾಮ ಜಪಿಸುತ್ತಿದ್ದ. ಎಳೆಯ ಮಗು ಗೋಪಾಲನ್ ಕಿವಿಯಾನಿಸಿಕೊಂಡು ಕೇಳಿದ.

'ಅಪ್ಪಾ, ಅದು ಕೇಳಿಸುತ್ತಿರುವುದೇನು?'

'ಯಾವುದು?'

'ಬ್ಯಾಂಡಿನ ಶಬ್ದ'

ನಾಣು ಕಿವಿಗೊಟ್ಟು ಆಲಿಸಿದ... ನಾಗಸ್ವರ ಮತ್ತು ಬ್ಯಾಂಡುವಾದ್ಯಗಳ ಶಬ್ದ. ದೂರದ ಓಣಿಯ ಮೂಲಕ ಕಾಲ್ನಡಿಗೆಯಲ್ಲಿ ಮದುವೆಯ ದಿಬ್ಬಣವೊಂದು ಸಾಗುತ್ತಿದೆ...

'ಹೊಳೆಯಾಚೆಯ ಮಾಧವಿಯ ಮದುವೆ...'

ಬಾಗಿಲಿನಾಚೆ ಬದಿಯಲ್ಲಿ ಕುಳಿತಿದ್ದ ಲಕ್ಷ್ಮಿ ಹೇಳಿದಳು:

'ಹುಡುಗ ತೆಂಕಣದವನು...'

ಅದಕ್ಕೆ ನಾಣು ಏನನ್ನೂ ಹೇಳಲಿಲ್ಲ.

'ಅವನಿಗೆ ಮರಸೀಳುವ ಕಂಪೆನಿಯಲ್ಲಿ ಕೆಲಸವಂತೆ...'

ನಾಣುವಿನ ಭಕ್ತಿಯ ನಿಷ್ಠೆ ಚದುರಿ ಹೋಯಿತು. ಪ್ರಬಲವಾದ ಕೌಟುಂಬಿಕ ಸಮಸ್ಯೆಗಳು ಮನದಲ್ಲಿ ಸುಳಿದವು. ಅವನೂ ಮದುವೆಯೊಂದನ್ನು ಮಾಡುವುದಕ್ಕಿದೆ. ಹಿರಿಯಮಗಳು ಕುಂಜಿಗೆ ಹದಿನೆಂಟು ವಯಸ್ಸು ಕಳೆದಿದೆ. ಲಕ್ಷ್ಮಿ ಅದನ್ನು ನೆನಪು ಮಾಡಲಾರಂಭಿಸಿ ವರ್ಷವೊಂದು ಕಳೆಯಿತು.

ಮದುವೆ ಮಾಡಬಹುದು. ಆದರೆ ಖರ್ಚು ಮಾಡೋದಕ್ಕೆ ಹಣ ಎಲ್ಲಿದೆ? ಅದುವೇ ಬಹುದೊಡ್ಡ ಸಮಸ್ಯೆಯಾಗಿ ತಲೆದೋರಿದೆ. ಎರಡು ಹೊತ್ತು ಗಂಜಿಯೂಟ ಮಾಡಲು ಪ್ರಯಾಸಪಡಬೇಕಾಗಿದೆ.

ರಾತ್ರಿ ಅವರು ಅದರ ಕುರಿತೇ ಯೋಚಿಸಿದರು. 'ಹುಡುಗಿಯ ಮೈ ಮೇಲೆ ಒಂದು ಭತ್ತದ ಕಾಳಿನ ತೂಕದ ಚಿನ್ನವೂ ಇಲ್ಲ. ಕೊರಳಿಗೆ ಚಿಕ್ಕದೊಂದನ್ನಾದರೂ ಹಾಕಬೇಕು...'

'ಏನಾದರೂ ಸ್ವಲ್ಪ ಅಕ್ಕಿ ಬೇಯಿಸಿ ಬಂಧುಗಳಿಗೆ ಊಟ ಕೊಡಬೇಕು.'

'ಅದು ಆಗಬೇಕಾದ್ದೆ' ನಾಣುವೂ ಸಮ್ಮತಿಸಿದ.

'ಬೇಕಾದ್ದೆಲ್ಲ ಮಾಡಬೇಕು. ನಮಗಿರುವುದು ಒಬ್ಬಳೇ ಮಗಳಲ್ಲವೆ?'

'ಎಲ್ಲವನ್ನು ಮಾಡಿ ಮುಗಿಸಲು ರೂಪಾಯಿ ಸ್ವಲ್ಪವಾದರೂ ಬೇಕು...'

'ಹತ್ತಿನ್ನೂರು ರೂಪಾಯಿ ಹೇಗಿದ್ದರೂ ಬೇಕಾದೀತು, ಆದರೂ ಕಷ್ಟವೇ...'

ಕುಂಜಿ ನೋಡಲು ಸುಂದರವಾದ ಹೆಣ್ಣು. ಹಾಗಾಗಿಯೇ ಇರಬೇಕು ಮದುವೆಯ ಆಲೋಚನೆಗಳು ಹಲವು ಬಂದವು. ಪಟ್ಟಾಂಬಿಯಿಂದ ಬಂದವರೊಡನೆ ನಾಣುವಿಗೆ ಹೊಂದಿಕೆಯಾಯಿತು. ನಾಣು ಮತ್ತು ಲಕ್ಷ್ಮಿಗೆ ಹುಡುಗನ ನಡೆ ಹಿಡಿಸಿತು. ಒಳ್ಳೆಯ ಆರೋಗ್ಯವಿದೆ. ಒಂದು ಉದ್ಯೋಗವೂ ಇದೆ.

ಎಲ್ಲವೂ ಅನಿರೀಕ್ಷಿತವಾಗಿತ್ತು. ಕುಂಜಿಯ ಮದುವೆ ಸಾಮಾನ್ಯಕ್ಕಿಂತ ವಿಶೇಷವಾಗಿಯೇ ನಡೆಯಿತು. ಆದರೆ ಅದಕ್ಕೆ ಬೇಕಾದ ಹಣ ನಾಣುವಿಗೆ ಬಂದುದೆಲ್ಲಿಂದ ಎಂಬ ಬಗೆಗೆ ಕೆಲವರಿಗೆ ಮಾತ್ರವೇ ಗೊತ್ತಿತ್ತು. ಮನೆಯಿರುವ ಜಾಗದ ಹಕ್ಕುಪತ್ರ ಮಮ್ಮು ಯಜಮಾನನ ಕೈವಶವಾಗಿತ್ತು.

* * *

**ಮೂರು ವರ್ಷ.**

ಎರಡು ವರ್ಷದ ಕೂಸನ್ನು ಸೊಂಟದಲ್ಲಿಟ್ಟುಕೊಂಡು ಕುಂಜಿ ಒಂದು ದಿನ ಮನೆಗೆ ಬಂದಳು. ಆಗ ನಾಣು ಮನೆಯಲ್ಲಿರಲಿಲ್ಲ.

ಲಕ್ಷ್ಮಿಗೆ ಸ್ವಲ್ಪ ಆತಂಕವಾಗದೆಯಿರಲಿಲ್ಲ.

'ಮಗಳೇ, ಯಾಕೆ ಹೀಗೆ ಬಂದುಬಿಟ್ಟೆ?'

ಕುಂಜಿ ಏನನ್ನೂ ಹೇಳಲಿಲ್ಲ.